# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 51 |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.02.2024 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ನಗರಸಭೆ/ನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಹಬ್ಬಗಳು ಮತ್ತು ಇತರೆ ಧಾರ್ಮಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ನಗರಗಳಿಗೆ ಹಳ್ಳಿಗಳಿಂದ ಬಾಳೆ ಕಂದು, ಕುಂಬಳಕಾಯಿ, ಹೂವು ಹಾಗೂ ಇತರೆ ಹಸಿರು ಪದಾರ್ಥಗಳನ್ನು ಮಾರಾಟ ಮಾಡುವ ಸಂದರ್ಭಗಳಲ್ಲಿ ಮತ್ತು ಮಾರಾಟವಾಗದೆ ಉಳಿದ ಪದರ್ಥಾಗಳನ್ನು ರೈತರು ಅಲ್ಲಿಯೇ ಬಿಟ್ಟು ಹೋಗುತ್ತಿರುವುದು ಹೆಚ್ಚುತ್ತಿದ್ದು ಈ ಹಸಿರು ತ್ಯಾಜ್ಯವನ್ನು ಯಾವ ರೀತಿಯಲ್ಲಿ ವಿಲೇವಾರಿ ಮಾಡಲಾಗುತ್ತಿದೆ: (ಮಾಹಿತಿ ನೀಡುವುದು) | ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಾಮಾನ್ಯವಾಗಿ ಮಾರುಕಟ್ಟೆಗಳಲ್ಲಿ, ಸಾರ್ವಜನಿಕ ಪ್ರದೇಶಗಳಲ್ಲಿ ಮಾರಾಟವಾಗದೇ ಉಳಿಯುವ ತರಕಾರಿ, ಹಣ್ಣು, ಹೂವು ಇತರೆ ಹಸಿತ್ಯಾಜ್ಯವನ್ನು ನಗರಸ್ಥಳೀಯ ಸಂಸ್ಥೆಯ ವತಿಯಿಂದ ಪ್ರತ್ಯೇಕವಾಗಿ ಸಂಗ್ರಹಿಸಿ ತ್ಯಾಜ್ಯ ಸಂಸ್ಕರಣಾ ಘಟದಲ್ಲಿ Windrow ತಂತ್ರಜ್ಞಾನ ಹಾಗೂ vermicomposting ಮೂಲಕ ಗೊಬ್ಬರವಾಗಿ ಪರಿವರ್ತಿಸಲಾಗುತ್ತಿದೆ ಮತ್ತು ಕೆಲವು ನಗರಗಳಲ್ಲಿ ಬಯೋಗ್ಯಾಸ್ ತಂತ್ರಜ್ಞಾನದ ಮೂಲಕ ಸಂಸ್ಕರಣೆ ಮಾಡಲಾಗುತ್ತಿದೆ. |
| ಆ | ಕಳೆದ ಆಯುಧ ಪೂಜೆಯ ಸಂದರ್ಭದಲ್ಲಿ ಮೈಸೂರು ನಗರ ಪಾಲಿಕೆಯವರು ಈ ರೀತಿಯಲ್ಲಿ ಉಳಿದ ಹಸಿರು ತ್ಯಾಜ್ಯವನ್ನು ಬೇರ್ಪಡಿಸಿ ಸ್ಥಳೀಯ ಗೋಶಾಲೆಗಳಿಗೆ ನೀಡಿರುವುದು ಶ್ಲಾಘನೀಯವಾಗಿದ್ದು. ಈ ರೀತಿಯಲ್ಲಿಯೇ ರಾಜ್ಯದ ಎಲ್ಲಾ ನಗರ ಸಭೆ ಮತ್ತು ಪಾಲಿಕೆಗಳು ತರಕಾರಿ ಮಾರುಕಟ್ಟೆಗಳಲ್ಲಿ ಮತ್ತು ಬೀದಿ ಬದಿಗಳಲ್ಲಿ ಉಳಿದ ಹಸಿರು ತ್ಯಾಜ್ಯಗಳನ್ನು ಬೇರ್ಪಡಿಸಿ ಸ್ಥಳೀಯವಾಗಿ ಇರುವ ಗೋಶಾಲೆಗಳಿಗೆ ನೀಡಲು ಸರ್ಕಾರವು ತೆಗೆದುಕೊಳ್ಳುವ ತಿರ್ಮಾನಗಳೇನು: (ವಿವರ ನೀಡುವುದು) | ಸರ್ಕಾರದ ಆದೇಶದ ಸಂಖ್ಯೆ: ನಅಇ 291 ಸಿಎಸ್ಎಸ್ 2020, ದಿನಾಂಕ:22-10-2020 ರೀತ್ಯಾ ರಾಜ್ಯವು ಜಾರಿಗೆ ತಂದಿರುವ ನಗರ ಘನತ್ಯಾಜ್ಯ ನಿರ್ವಹಣೆ ರಾಜ್ಯ ನೀತಿ ಮತ್ತು ಕಾರ್ಯತಂತ್ರದಲ್ಲಿ ನಗರ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಹಸಿ ತಾಜ್ಯ ಹಾಗೂ ಒಣ ತ್ಯಾಜ್ಯ ವಸ್ತುಗಳ ಪ್ರತ್ಯೇಕವಾಗಿ ಸಂಗ್ರಹಿಸಿ ವೈಜ್ಞಾನಿಕ ಸಂಸ್ಕರಣೆ ಮತ್ತು ವಿಲೇವಾರಿ ಕುರಿತಾಗಿ ವಿಸ್ತೃತವಾಗಿ ಈಗಾಗಲೇ ತಿಳಿಸಲಾಗಿರುತ್ತದೆ.<br><br>ಅದರಂತೆ ಮನೆ, ಹೋಟೆಲ್, ಮಾರುಕಟ್ಟೆ, ಇತರೆ ವಾಣಿಜ್ಯ ಸಂಕೀರ್ಣದಿಂದ ಸಂಗ್ರಹವಾಗುವ ಆಹಾರ ತ್ಯಾಜ್ಯ ಉಳಿದ ತರಕಾರಿ, ಹಣ್ಣು, ಹೂವು ಮತ್ತು ಇತರೆ ಹಸಿ ತ್ಯಾಜ್ಯವನ್ನು ಹಂದಿ ಸಾಕಾಣಿಕೆ ಕೇಂದ್ರ, ಮೀನುಗಾರಿಕೆ, ಕೋಳಿ ಸಾಕಾಣಿಕೆ ಹಾಗೂ ಗೋಶಾಲೆಗಳಿಗೆ ನೀಡಿ, ಕೇಂದ್ರೀಕೃತ ತ್ಯಾಜ್ಯ ಸಂಸ್ಕರಣೆ ಘಟಕಕ್ಕೆ ಸಾಗಿಸುವುದನ್ನು ಕಡಿಮೆಗೊಳಿಸಲು ಈಗಾಗಲೇ ತಿಳಿಸಲಾಗಿರುತ್ತದೆ. |

| | | |
|---|---|---|
| ಇ | ಮೈಸೂರು ಪಾಲಿಕೆಯವರು ಕಳೆದ ಆಯುಧ ಪೂಜೆಯಲ್ಲಿ ಅನುಸರಿಸಿದ ರೀತಿಯಲ್ಲಿ ಎಲ್ಲಾ ಸ್ಥಳೀಯ ಸಂಸ್ಥೆಗಳು ಅನುಸರಿಸಿದ್ದಲ್ಲಿ ಹಸಿರು ಕಸದ ಸಮಸ್ಯೆಯನ್ನು ಕಡಿಮೆಗೊಳಿಸ ಬಹುದಾಗಿದ್ದು ಈ ಕುರಿತು ಸರ್ಕಾರದ ಚಿಂತನೆಗಳೇನು? | ಮೈಸೂರು ಪಾಲಿಕೆಯು ಕಳೆದ ಆಯುಧ ಪೂಜೆಯ ಅವಧಿಯಲ್ಲಿ ಸಂಗ್ರಹವಾದ ಹಸಿ ತ್ಯಾಜ್ಯವನ್ನು ಬೇರ್ಪಡಿಸಿ ಸ್ಥಳೀಯ ಗೋಶಾಲೆಗಳಿಗೆ ನೀಡಿರುವ ಮಾದರಿಯನ್ನು ಇತರೆ ಸ್ಥಳೀಯ ಸಂಸ್ಥೆಗಳು ಅನುಸರಿಸುವಂತೆ ನಿರ್ದೇಶನ ನೀಡಲಾಗುವುದು. |

ಸಂಖ್ಯೆ:ನಅಇ 37 ಎಂಎನ್‌ಇ 2024(ಇ).

12/02/2024

(ಬಿ.ಎಸ್.ಸುರೇಶ)

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು